ಅ) ಈ ಎಲ್ಲಾ ಶಾಲೆಗಳಿಗೆ ಸ್ವಂತ ಕಟ್ಟಡಗಳು ಇವೆಯೇ ?

ಇ) ಇಲ್ಲದಿದ್ದಲ್ಲಿ ಇವುಗಳಿಗೆ ಸ್ವಂತ ಕಟ್ಟಡಗಳನ್ನು ಯಾವಾಗ ಒದಗಿಸಲಾಗುವುದು ?

ಈ) ಅರ್ಧ ಕಟ್ಟಿದ ಕಟ್ಟಡಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು ?

ಶ್ರೀ ಬಿ. ರಾಚಯ್ಯ (ಮಾನ್ಯ ಶಿಕ್ಷಣ ಮಂತ್ರಿಗಳು). —

ಅ) ಪ್ರಾಥಮಿಕ ಶಾಲೆಗಳ ಸಂಖ್ಯೆ ೪೦

ಆ) ೩೨ ಶಾಲೆಗಳಿಗೆ ಸ್ವಂತ ಕಟ್ಟಡಗಳಿವೆ. ಉಳಿದ ೮ ಶಾಲೆಗಳು ಬಾಡಿಗೆ ಮತ್ತು ಬಾಡಿಗೆ ರಹಿತ ಕಟ್ಟಡಗಳಲ್ಲಿವೆ.

ಇ) ಉಳಿದ ೮ ಶಾಲೆಗಳಿಗೆ ೧೯೬೪-೬೫ ಮತ್ತು ೧೯೬೫-೬೬ನೆಯ ಸಾಲುಗಳಲ್ಲಿ ಸ್ವಂತ ಕಟ್ಟಡಗಳನ್ನು ಒದಗಿಸಲು ಪ್ರಯತ್ನಿಸಲಾಗುವುದು.

ಈ) ಅರ್ಧ ಕಟ್ಟಿದ ಕಟ್ಟಡಗಳನ್ನು ಈ ವರ್ಷದ ೧೯೬೫-೬೬ನೇ ಸಾಲಿನ ಅಂತ್ಯದಲ್ಲಿ ಪೂರ್ಣ ಮಾಡುವಂತೆ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳನ್ನು ನಿಯಂತಿಸಲಾಗಿದೆ,

ಶ್ರೀ ಬಿ. ಹೆಚ್. ಯಂಕಾನಾಯ್ಕ. — ಈಗ ಕೆಲವು ಶಾಲಾ ಕಟ್ಟಡಗಳ ಕೆಲಸ ಅರ್ಧದಲ್ಲಿಯೇ ನಿಂತಿವೆ. ಇವುಗಳ ಕೆಲಸವನ್ನು ಯಾವಾಗ ಪೂರ್ತಿಗೊಳಿಸುತ್ತೀರಿ ?

ಶ್ರೀ ಬಿ. ರಾಚಯ್ಯ. — ೧೯೬೫-೬೬ನೇ ಸಾಲಿನಲ್ಲಿ ಈ ಕಟ್ಟಡಗಳ ಕೆಲಸವನ್ನು ಪೂರ್ತಿ ಮಾಡಬೇಕೆಂದು ತಿಳಿಸಿದ್ದೇವೆ. ಇದಕ್ಕಾಗಿ ೬೬ ಸಾವಿರ ರೂಪಾಯಿಗಳನ್ನು ಒದಗಿಸಿದ್ದೇವೆ. ತಾರೀಕು. ೩೧-೩-೧೯೬೬ರ ಒಳಗಾಗಿ ೫ ಶಾಲೆಗಳ ಕಟ್ಟಡಗಳನ್ನು ಮುಗಿಸಬೇಕೆಂದು ಹೇಳಿದ್ದೇವೆ.

ಶ್ರೀ ಬಿ. ಹೆಚ್. ಯಂಕಾನಾಯ್ಕ. — ಕೆಲವು ಶಾಲಾ ಕಟ್ಟಡಗಳ ಕೆಲಸ ಪೂರ್ತಿಯಾಗಿ, ಅಲ್ಲಿ ಶಾಲೆಗಳು ಪ್ರಾರಂಭವಾಗುವುದಕ್ಕೆ ಮೊದಲೇ ಅಲ್ಲಿನ ಗೋಡೆಗಳು ಮುತ್ತು ಮೆಂಚುಗಳು ಬಿದ್ದು ಹೋಗಿವೆ. ಈ ಕಟ್ಟಡಗಳನ್ನು ಕಟ್ಟಿದವರು ಈಗಾಗಲೇ ಹಣ ಪಡೆದುಕೊಂಡುಬಿಟ್ಟಿದ್ದಾರೆ. ಆದ್ದರಿಂದ ಸಂಬಂಧಪಟ್ಟವರ ಮೇಲೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಬಿ. ರಾಚಯ್ಯ. — ಈಗ ಎಲ್ಲೆಲ್ಲಿ ರಿಪೇರಿಯಾಗಬೇಕಾಗಿದೆ ಎಂಬ ಬಗ್ಗೆ ಮಾನ್ಯ ಸದಸ್ಯರು ಒಂದು ಪಟ್ಟಿಯನ್ನು ಕೊಟ್ಟರೆ ನಾನು ಅದಕ್ಕೆ ಬೇಕಾದ ಹಣವನ್ನು ಒದಗಿಸಿಕೊಡುತ್ತೇನೆ.

ಕೃಷ್ಣರಾಜನಗರ ತಾಲ್ಲೂಕಿನಲ್ಲಿ ಕೀಟ ಹಾವಳಿಯಿಂದ ಬೆಳಗಳ ನಾಶ

೨೫೫. ಶ್ರೀ. ಎಸ್ ನಂಜಪ್ಪ (ಕೃಷ್ಣರಾಜನಗರ) ಈ ಕೆಳಕಂಡಂತೆ ಪ್ರಶ್ನೆಗಳಿಗೆ ಮಾನ್ಯ ವ್ಯವಸಾಯ ಮಂತ್ರಿಗಳ ದಯೆಯಿಟ್ಟು ಉತ್ತರಿಸುವರೇ ?

ಅ) ಕೃಷ್ಣ ರಾಜನಗರ ತಾಲ್ಲೂಕಿನ ಚುಂಚನಕಟ್ಟೆ ಹೋಬಳಿಯಲ್ಲಿ ಕೀಟಗಳ ಹಾವಳಿಯಿಂದ ಬೆಳಗಳ ನಾಶವಾಗಿರುವುದು ನಿಜವೆ?

ಆ) ಈ ಕೀಟಗಳ ನಿವಾರಣೆಗಾಗಿ ಸರ್ಕಾರದವರು ಕೈಕೊಂಡ ಕ್ರಮವೇನು?

ಇ) ಕೃಷ್ಣರಾಜನಗರದ ತಾಲ್ಲೂಕಿನ ಸಾಲಿಗ್ರಾಮದ ಹೋಬಳಿಯಲ್ಲಿ ತಂಬಾಕು ಬೆಳೆ ಅನೇಕಲ್ಲು ಜಳಿಯಿಂದ ನಾಶವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ.ಬಿ.ವಿಲ್ ಗೌಡ (ಕೃಷಿ ಮಂತ್ರಿಗಳು) —

ಅ) ಹೌದು.

ಆ) ಸುಮಾರು ೨೩೫ ಹೆಕ್ಟೇರು ಪ್ರದೇಶದಲ್ಲಿ ಇದ್ದಕ್ಕಿದ್ದಂತೆ ಕಂಬಳಿ ಹುಳುಗಳು ಕಾಣಿಸಿಕೊಂಡವು. ಕಕ್ಷಣವೆ ರೈತರಿಗೆ ಹತೋಟಿ ಕ್ರಮಗಳ ಬಗ್ಗೆ ತಿಳುವಳಿಕೆ ಕೊಡಲಾಯಿತು. ಕ್ರಿಮಿನಾಶಕಗಳನ್ನು ಧೂಳಿಕರಿಸಿ ಮತ್ತು ಯಾಂತ್ರಿಕವಾಗಿ ಹತೋಟಿ ಕ್ರಮಗಳನ್ನು ತೆಗೆದುಕೊಂಡು ಸುಮಾರು ೯೧೦ ಹೆಕ್ಟೇರು ಪ್ರದೇಶದ ಬೆಳೆಗಳನ್ನು

ಕೀಟಗಳ ಹಾವಳಿಯಿಂದ ಸಂರಕ್ಷಿಸಲಾಯಿತು. ಹಾನಿಗೊಳಗಾದ ಪ್ರದೇಶದಲ್ಲಿ ಪುನಃ ರಾಗಿಯನ್ನು ಬಿತ್ತಿಸಲಾಗಿದೆ. ಹೆಚ್ಚಿನ ಸಂಖ್ಯೆಯ ರೈತರಿಗೆ ತಿಳುವಳಿಕೆ ಕೊಡುವುದ ಕ್ಕಾಗಿ ಸ್ಥಳೀಯ ದಿನಪತ್ರಿಕೆಗಳು ಹಾಗೂ ಆಕಾಶವಾಣಿ ಮಾಧ್ಯಮವನ್ನು ಬಳಸ ಲಾಯಿತು.

ಇ) ಬಂದಿದೆ.

ಶ್ರೀ ಎಸ್. ನಂಜಪ್ಪ.—ಮಾನ್ಯ ಅಧ್ಯಕ್ಷರೇ, ಈ ರೀತಿ ಕೀಟಗಳ ಹಾವಳಿಯಿಂದ ಸಂಕಷ್ಟಕ್ಕೆ ಒಳಗಾದಂಥ ರೈತರಿಗೆ ಸರ್ಕಾರದವರು ಪರಿಹಾರವನ್ನು ಏನಾದರೂ ಕೊಡುತ್ತಾರೆಯೆ?

ಶ್ರೀ ಎಸ್. ರೇವಣ್ಣ.—ಇದಕ್ಕೆ ಬೇಕಾದ ಔಷಧಗಳನ್ನು ಸಬ್ಸಿಡಿ ರೂಪದಲ್ಲಿ ಒದಗಿಸಲು ವ್ಯವಸ್ಥೆ ಮಾಡುತ್ತೇವೆ.

ಒಪ್ಪಂದದ ಆಧಾರದ ಮೇಲೆ ಪದವೀಧರ ಶಿಕ್ಷಣ ನೇಮಕಾತಿ

೩೧೮. ಶ್ರೀ ವಿಶ್ವನಾಥ್‌ಪಾಟೀಲ್ (ಚಿತ್ರಾಪುರ) ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಂಟ್ರಾಕ್ಟ್ ಪದ್ಧತಿ ಮೇರೆಗೆ ಪದವೀಧರ ಶಿಕ್ಷಕರನ್ನು ನೇಮಿಸುವ ಶಿಕ್ಷಣ ಸಚಿವರ ಹೇಳಿಕೆಯು ಸ್ಟೈಪೆಂಡರಿ ಪದವೀಧರರ ಸಮಸ್ಯೆಯಂತೆ ಮುಂದೆ ಸಮಸ್ಯೆಯಾಗುವು ದಿಲ್ಲವೆ ?

ಆ) ಮುಂದೆ ತಲೆದೋರಬಹುದಾದ ಈ ಸಮಸ್ಯೆಯನ್ನು ಖಾಯಂ ಶಿಕ್ಷಕರನ್ನು ನೇಮಿಸುವ ಮೂಲಕ ಪರಿಹರಿಸಬಹುದಾಗಿದ್ದು ಹಾಗೆ ಮಾಡಲು ಸರ್ಕಾರದವರಿಗೆ ಇರುವ ಅಡಚಣೆಗಳು ಏನು?

ಇ) ಪ್ರತಿಯೊಂದು ಶಾಲೆಗೆ ಅವಶ್ಯಕತೆ ಇರುವಷ್ಟು ಶಿಕ್ಷಕರನ್ನು ನೇಮಿಸುವ ವಿಚಾರ ಸರ್ಕಾರದವರ ಗಮನದಲ್ಲಿ ಇದೆಯೆ?

ಈ) ಹಾಗಿದ್ದಲ್ಲಿ ಯಾವಾಗ ನೇಮಕಾತಿ ಮಾಡಲಾಗುವುದು ?

ಶ್ರೀ. ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

ಅ) ಪ್ರೌಢಶಾಲಾ ಶಿಕ್ಷಕರ ನೇಮಕಾತಿಯನ್ನು ನಿಯಮಾವಳಿಯ ಪ್ರಕಾರ ಮಾಡುವ ಕೆಲಸ ಪ್ರಾರಂಭವಾಗಿದ್ದರು ಅದು ಮುಗಿಯಲು ಇನ್ನೂ ಸ್ವಲ್ಪ ಸಮಯ ತೆಗೆದು ಕೊಳ್ಳುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆ ಯಾಗದಿರಲು ಕಾಂಟ್ರಾಕ್ಟ್ ಪದ್ಧತಿ ಮೇರೆಗೆ ಶಿಕ್ಷಕರನ್ನು ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಲು ಸೂಚಿಸಿದೆ.

ನಿಯಮಾವಳಿಯ ಪ್ರಕಾರ ನೇಮಕಾತಿ ಮಾಡಲು ಬೇಕಾದ ಕಾಲಸಮಯವೇ ಮುಖ್ಯ ಅಡಚಣೆ ಈ ತಾತ್ಕಾಲಿಕ ನೇಮಕಾತಿಯಿಂದಾ ಯಾವ ಸಮಸ್ಯೆಯು ಉದ್ಭವಿಸಲಾರದು

ಇ) ಹೌದು.

ಈ) ಸರ್ಕಾರವು ಪ್ರೌಢಶಾಲಾ ಶಿಕ್ಷಕರ ನೇಮಕಾತಿಯನ್ನು ಲೋಕಸೇವಾ ಆಯೋಗದ ವ್ಯಾಪ್ತಿಯಿಂದಾ ಹೊರತೆಗೆದು ಅದನ್ನು ವಿಭಾಗೀಯ ನೇಮಕಾತಿ ಮಂಡಳಿಗಳಿಗೆ ಒಪ್ಪಿಸಿ ಅದಷ್ಟು ಬೇಗ ಉಪಾಧ್ಯಾಯರ ನೇಮಕ ಮಾಡಲು ಈಗಾಗಲೇ ನಿರ್ಧರಿಸಿದೆ.

ಮಾನ್ಯ ಸದಸ್ಯರು ಹಾಜರಿರಲಿಲ್ಲ

ಗುಲ್ಬರ್ಗಾ ವಿಶ್ವವಿದ್ಯಾನಿಲಯದಲ್ಲಿ ಉಪನ್ಯಾಸಕರುಗಳ ನೇಮಕಾತಿ

೩೧೯ ಶ್ರೀ ಕೆ. ಬಿ. ಶಾಣಪ್ಪ (ಶಹಬಾದ್) ಈ ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸಿವರೇ?